ಮೈಸೂರ ಗೆಜೆಟ್.

ನಂ. XXXVIII] ಸರ್ಕಾರದಿಂದ ಪ್ರಾಂಯಿಸಿ ಆದ್ದು. [ನಂ 12.

ಬೆಂಗಳೂರು, ಗುರುವಾರ, ಮಾರ್ಚಿ ತಾ|| 26, ಸನ್ 1903.

IIನೇ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು ಮಗ್ಗೆರೆಲರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಫಾರೆಸ್ಟ್ ಇಲಾಖೆ.

ತಾರೀಖು 12ನೇ ಮಾರ್ಚಿ 1903, ಮೊಕ್ಕಾಂ ಬೆಂಗಳೂರು.

ನೆಲವಂಗಲದ ತಾಲ್ಲೂಕು ಸೊಲದೇವನಹಳ್ಳಿ, ಗೊರವನಹಳ್ಳಿ, ಬೊಲಿಮಾರನಹಳ್ಳಿ, ಚಾಡನಂದ್ರ ಈ ಗ್ರಾಮದ ಜಮೀನು ಗಳು ಸ್ಟೇಟ್ ಫಾರೆಸ್ಟಿಗೆ ದಾಖಲ್ಮಾಡಿಕೊಳ್ಳತಕ್ಕ ಖಾಜಿ ಫಾರೆಸ್ಟ್ ಇಲಾಖೆ ಮಾರೀಫತ್ತು ಇಸ್ತಿಹಾರ್ ಗೆಜೆಟೆನಲ್ಲಿ ಫಾಯಿಷಾಗಿ ಇದರ ವ್ಯವಸ್ಥೆ ಬಗ್ಯೆ ನಮ್ಮನ್ನು ನೇಮಕ ಮಾಡಿರುವಂತೆ 1903ನೇ ಇಸವಿ ಜನವರಿ 29ನೇ ಮುದ್ದಾಂ 462—4476ನೇ ನಂಬರು ನೋಟಫಿಕೇರ್ಷ ಅನುಸರಿಸಿ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಸೊಲದೇವನಹಳ್ಳಿ ಗ್ರಾಮದ ಸರ್ವೆ 5–12–4–6–7–8–16–17–18–9–10–11 ಗೊರವೆನಹಳ್ಳಿ ಗ್ರಾಮದ ಸರ್ವೆ 13–14–15–17–16 ಬೊಲಿಮಾರನಹಳ್ಳಿ ಗ್ರಾಮದ ಸರ್ವೆ 35–36–37–38–39–40 ಚಾಡನಂದ್ರ ಗ್ರಾಮದ 22–28–20 ಈ ನಂಬರುಗಳು ಸ್ಟೇಟ್ ಫಾರೆಸ್ಟಿಗೆ ಶೇರಿಕೊಳ್ಳುವದು ಅವಶ್ಯಕವಾಗಿ ಇರುವದ್ದರಿಂದ ಫಾರೆಸ್ಟ್ ರೆಗ್ಯುಲೇರ್ಷ 5ನೇ ಸೆಕ್ಷರ್ಷ ಅನುಸರಿಸಿ ಈ ಜಮೀನುಗಳ ಯಾವ ಹಕ್ಕುದಾರರು ನ್ನಾದರು ನಮೂದಿಸುವ ಅಥವಾ ದಾವೆಯನ್ನಾದರು ಮಾಡುವ ಪ್ರತಿ ಮನುಷ್ಯನಿಗೂ ಅಂಥಾ ಹಕ್ಕುದಾರ್ರು ಅಥವಾ ದಾವೆಯ ಸ್ವಭಾವವನ್ನು ವಿವರಿಸಿ ಇರುವ ಬಂದು ಬರಹ ಮೂಲಕವಾದ ನೋಟಿಸನ್ನು ಇಸ್ತಿಹಾರು ಗೆಜೆಟ್ಟಿನಲ್ಲಿ ಫಾಯಿಷಾದ ತಾರೀಖು ಲಾಗಾಯತು 3 ತಿಂಗಳು 15 ದಿವಸಗಳ ವಳಗಾಗಿ ನಮ್ಮಲ್ಲಿ ಹಾಜರ್ಮಾಡಬೇಕು ಅಥವಾ ಆ ವಾಯಿದೆ ಅಂದರುವಾರು ನಮ್ಮ ರೂಬು ರೂಬು ಹಾಜರಾಗಿ ಬರ್ಮಾ ಮಾಡಬೇಕು.

ಸ್ಟೇಟ್ ಫಾರೆಸ್ಟಿಗೆ ಸೇರೋಣದ್ದರಿಂದ ಉತ್ತರೋತ್ತರ ಜಮೀನುಗಳಲ್ಲಿ ಜನ ಪಾತ್ರು ದನ ಕರುಗಳು ಪ್ರವೇಶ ಮಾಡಲು ನಿರ್ಬಂಧ ಉಂಟಾಗುವದಲ್ಲದೆ ಎಲ್ಲಾ ಹಕ್ಕು ನಿವರ್ತಿಯಾಗುವದು. ಆದಕಾರಣ ವಾಯಿದೆ ಳಗೆದುಬರುವ ತಕರಾರುಗಳನ್ನು ಅಂಗೀಕರಿಸಲ್ಪಡುವದಿಲ್ಲಾ ತಿಳಿಯುವದು.

ಮತ್ತು ಫಾರೆಸ್ಟ್ ರೆಗ್ಯುಲೇರ್ಷ 6ನೇ ಸೆಕ್ಷರ್ಷ ಅನುಸರಿಸಿ ತಿಳಿಯಪಡಿಸುವದೇನಂದರೆ—ಸ್ಟೇಟ್ ಫಾರೆಸ್ಟ್ ಆಗಿರಬೇಕೆಂದು ಮೊಕರರ್ರಾಡುವ ಇಸ್ತಿಹಾರಿನಿಂದ ಗೊತ್ತಾಗುವ ತಾರೀಖಿಗೂ ಈ ಇಸ್ತಿಹಾರ್ ಫಾಯಿಷ್ ಆಗುವದಕ್ಕೂ ಮಧ್ಯಕಾಲದಲ್ಲಿ ಈ ಜಮೀನ್ ಅಥವ ಇದರಮೇಲೆ ಯಾವ ಹಕ್ಕನ್ನಾಗಲಿ ಸರಕಾರದ ಅಪ್ಪಣೆ ಶಿವಾಯಿ ಸಂಪಾದಿಸಕೂಡದು ಮತ್ತು ಅಂಥಾ ಜಮೀನುಗಳಲ್ಲಿ ಹೊಸದಾಗಿ ಮನೆ ವಗೈರೆ ಕಟ್ಟಸಕೂಡದು ಎಂದು ಇದರಿಂದ ಎಲ್ಲರಿಗೂ ತಿಳಿಯಪಡಿಸಿ ಇದೆ.

ಡಿ. ಎಂ. ನರಸಿಂಗರಾವ್,
ಫಾರೆಸ್ಟ್ ಸೆಟ್ಲಮೆಂಟ್ ಆಫಿಸರ್, ಬೆಂಗಳೂರು ಡಿಸ್ಟ್ರಿಕ್ಟ್.

1903ನೇ ಇಸವಿ ಮಾರ್ಚಿ ತಾರೀಖು 13ರಲ್ಲು.

ಫಾರೆಸ್ಟ್ಸ ಸೆಟ್ಲಮೆಂಟ್, ಕಡೂರು ಡಿಸ್ಟ್ರಿಕ್ಟ್.

ತರೀಕೆರೆ ತಾಲ್ಲೂಕು, ಹಾದಿಕೆರೆ ಫಾರೆಸ್ಟ್ಟು.

ಸ॥ 1901ನೇ ಇಸವಿ 11ನೇ ಖಾನೂನಾದ ಮೈಸೂರ ಫಾರೆಸ್ಟ್ಸ ರೆಗ್ಯುಲೇಷ್ನ 5ನೇ ಪ್ರಕರಣವನ್ನು ಅನುಸರಿಸಿ ಸಮಸ್ತ ಜನಗಳಿಗೂ ಇದರಿಂದ ಪ್ರಸಿದ್ಧಪಡಿಸುವದೇನಂದರೆ :—

ಸ॥ 1903ನೇ ಇಸವಿ ಫೆಬ್ರವರಿ ಮಾಹೆ 19ನೇ ತಾರೀಖಿನ ಮೈಸೂರ ಗೆಜೆಟ್ಟಿನಲ್ಲಿ ಪ್ರಕಟಪಡಿಸಿರುವ ಮೇರೆಗೆ ಈ ಕೆಳಗೆ ತಪಶೀಲು ಕಂಡ ಜಮ್ರ್ಹಾ ಪ್ರದೇಶವನ್ನೆಲ್ಲಾ ಸರ್ಕಾರಿ ಮನ್ನಾ ಜಂಗ್ಲಿಯಾಗಿ ಮಾಡಬೇಕೆಂದು ನಿಶ್ಚೈಸಲ್ಪಟ್ಟಿರ್ಧೆಯಾದ್ದರಿಂದ, ಈ ಸ್ತಿಹಾರು ಫಾಯಿಷಾದ ಲಾಗಾಯಿತು ಮೈಸೂರ ಫಾರೆಸ್ಟ್ಟು ರೆಗ್ಯುಲೇಷ್ನ 17ನೇ ಪ್ರಕರಣವನ್ನು ಅನುಸರಿಸಿ, ಇನ್ನೊಂದು ಹೊಸ ಇಸ್ತಿಹಾರು ಕೊಡಲ್ಪಡುವ ವರಿಗೆ, ಸದರೀ ಪ್ರದೇಶದಲ್ಲಿ ಆಡಗಿರುವ ಯಾವ ಜಮಿನಿನಲ್ಲಾಗಲೀ ಯಾವ ಹಕ್ಕೂ ನೂತನವಾಗಿ ಸಂಪಾದಿಸಲ್ಪಡತಕ್ಕದ್ದಲ್ಲವು. ಆದರೆ ವಾರಸ್ದಾರಿಯಿಂದ ಪಡದ ಹಕ್ಕೂ, 1903ನೇ ಇಸವಿ ಫೆಬ್ರವರಿ ಮಾಹೆ 19ನೇ ತಾರೀಖಿಗೆ ಹಿಂದೆ ಸರ್ಕಾರದಿಂದಲಾಗಲೀ, ಅಥವಾ ಜೇರೆ ಬಾಧ್ಯಕರ್ತರಿಂದಾಗಲೀ ಮೊದಲೇ ಹುಟ್ಟಿ, ಲಿಖಿತಮೂಲಕ ನಿರ್ಧರಿಸಲ್ಪಟ್ಟಿರುವ ದಾನ, ದ್ರಕ್ಷೆ, ವಗೈರೆ ಲೇವಾದೇವಿಯಿಂದುಂಟಾದ ಯಾವ ಬಾಧ್ಯತೆಯೂ ಸಹ, ಇದರಿಂದ ನಿರೋಧಿಸಲ್ಪಡುವದಿಲ್ಲವು. [ಅನುಮಾನಾಸ್ಪದವಾದ ಸಂದರ್ಭಗಳಲ್ಲಿ ಈ ಕೆಳಗೆ ದಸ್ಕತ್ ಮಾಡಿರುವ ಫಾರೆಸ್ಟ್ಸ ಸೆಟಲ್ಮೆಂಟ್ ಆಫಿಸರಿಗೆ ಬರದುಕೊಂಡು ಅವರಿಂದ ಲಿಖಿತಮೂಲಕವಾದ ಅಪ್ಪಣೆ ಪಡೆದು ನಡೆದುಕೊಳ್ಳತಕ್ಕದ್ದು.]

ಸದರೀ ಪ್ರದೇಶದಲ್ಲಿ ಯಾವ ಕಡೆಯಲ್ಲೂ ಸಾಗುವಳಿಗಾಗಲೀ, ಇನ್ಯಾವ ಉದ್ದೇಶಕ್ಕಾಗಲಿ, ಫಾರೆಸ್ಟ್ಸ ಸೆಟಲ್ಮೆಂಟ್ ಆಫಿಸರವರ ಅಪ್ಪಣೆ ಶಿವಾಯಿ, ಗಿಡ ಕತರಾವಣೆ ವಗೈರೆ ಮಾಡಲ್ಪಡಕೂಡದು.

ಫಾರೆಸ್ಟ್ಸ ಸೆಟಲ್ಮೆಂಟ್ ಆಫಿಸರ ಅನುಮತಿ ಇಲ್ಲದೆ ಆ ಪ್ರದೇಶದಲ್ಲಿ ಯಾವ ಜಮಿನಿಗೂ ಸಾಗುವಳಿ ಪಟ್ಟಿ ಕೊಡಲ್ಪಡುವದಿಲ್ಲವು.

ಆದುದರಿಂದ ಮೇಲ್ಕಂಡ ಜಮಿನಿನ ಪೈಕಿ ಯಾವದಕ್ಕಾದರೂ ಹಕ್ಕಿದೆ ಎಂದು ವಾದಿಸುವ ಸಮಸ್ತ ಜನಗಳು, ಈ ಇಸ್ತಿಹಾರು ಮೈಸೂರ ಗೆಜೆಟ್ಟಿನಲ್ಲಿ ಫಾಯಿಷಾದ ತಾರೀಖು ಲಾಗಾಯಿತು ಮೂರು ತಿಂಗಳೊಳಗಾಗಿ, ತಮ್ಮ ಹಕ್ಕುಗಳ ಸ್ವಭಾವವನ್ನು ಈ ಕೆಳಗೆ ದಸ್ಕತ್ ಮಾಡಿರುವ ಫಾರೆಸ್ಟ್ಸ ಸೆಟಲ್ಮೆಂಟ್ ಆಫಿಸರವರಲ್ಲಿ ರೂಬರೂಬ್ ಹಾಜರಾಗಿ, ಮೂಜಬಾನಿಯಿಂದಾಗಲೀ, ಅರ್ಜಿ ಮೂಲಕವಾಗಿಯಾಗಲೀ, ಮನವಿ ಮಾಡಿಕೊಳ್ಳತಕ್ಕದ್ದಲ್ಲದೆ ತಮ್ಮ ಹಕ್ಕುಗಳನ್ನು ಸ್ಥಾಪಿಸುವದಕ್ಕೆ ಸಾಧಕವಾಗಬಹುದಾದ ದಸ್ತೈವಜು ವಗೈರೆಗಳನ್ನು ಸಹ ಹಾಜರ್ಮಾಡತಕ್ಕದ್ದು.

ಷೆಡ್ಯೂಲ್.

ಡಿಸ್ಟ್ರಿಕ್ಟು.	ತಾಲ್ಲೂಕು, ಹೋಬಳಿ ಇ ಗ್ರಾಮ.	ಸುಮಾರು ವಿಸ್ತೀರ್ಣ.	ಬ್ಲಾಕ್ಕಿನ ಹೆಸರು.	ಸ್ಥಳ ವ ಚಕ್ಕುಬಂದಿ.
ಕಡೂರು.	ತರೀಕೆರೆ ತಾಲ್ಲೂಕು.	20 ಚದರ ಮೈಲಿಗಳು ಮತ್ತು 432 ಎಕರೆಗಳು.	ಹಾದಿಕೆರೆ.	ಸ್ಥಳ.—ತರೀಕೆರೆ ತಾಲ್ಲೂಕಿನ ಉತ್ತರಕ್ಕೆ ಇರುವ ಉದ್ದವಾದ ಮತ್ತು ಕಿರಿದಾದ ಫಾರೆಸ್ಟ್ಟಿನ ತುಂಡು. ಚಕ್ಕುಬಂದಿ. ಉತ್ತರಕ್ಕೆ.—ರಂಗಾಪುರದ ಸರ್ವೆ ನಂ. 10ರ ವಾಯುವ್ಯ ಮೂಲೆಯಿಂದ ಹೊರಟು ಲೈನು ಶಿವಮೊಗ್ಗ ತಾಲ್ಲೂಕು ಕಾರೆಹಳ್ಳಿ ಗ್ರಾಮದ ದಕ್ಷಿಣ ಮತ್ತು ಆಗ್ನೇಯ ಎಲ್ಲೆ ಉದ್ದಕ್ಕೂ ಹೋಗುತ್ತದೆ. ತರುವಾಯ ಗುಲ್ಲದಹಟ್ಟಿ ಜೋಡಿಗ್ರಾಮದ ದಕ್ಷಿಣ ಎಲ್ಲೆ ಮತ್ತು ಶಿವಮೊಗ್ಗ ತಾಲ್ಲೂಕು ಸಿಬ್ರಹಳ್ಳಿ ಗ್ರಾಮದ ದಕ್ಷಿಣ ವ ಆಗ್ನೇಯ ಎಲ್ಲೆಗಳು ಇವುಗಳ ಉದ್ದಕ್ಕೂ ಚೆನ್ನಗಿರಿ ರೇಂಜು ಕುಕ್ವಾಡ ಉಬ್ರಾಣಿ ಸ್ಟೇಪ್ ಫಾರೆಸ್ಟಿನ ಹದ್ದು ವಿಂಗಡಿಸಲ್ಪಟ್ಟ ಲೈನನ್ನು ಮುಟ್ಟುವ ಸ್ಥಳಕ್ಕೆ ಹೋಗುತ್ತದೆ. ಆಮೇಲೆ ಅದೇ ಫಾರೆಸ್ಟಿನ ದಕ್ಷಿಣ ಪಾರ್ಶ್ವದ ಉದ್ದಕ್ಕೂ ಬುದಿಗುಪ್ಪೆಯ ಸರ್ವೆ ನಂ. 4ರ ನೈರುತ್ಯ ಮೂಲೆಗೆ ಹೋಗುತ್ತದೆ. ಪೂರ್ವಕ್ಕೆ.—ಅಲ್ಲಿಂದ ಕೇಂಚಾಪುರದ ಸರ್ವೆ ನಂ. 15ರ ಮಧ್ಯೆ, ಸಿರಗಲಿ ಪುರದ ಸರ್ವೆ ನಂ. 37ರ ಮಧ್ಯೆ ಪೂರ್ವದಿಕ್ಕಾಗಿಯೂ ಮತ್ತು ದಕ್ಷಿಣ ದಿಕ್ಕಾಗಿಯೂ ಸಿರಗಲಿಪುರ, ಜಲುದಿಹಳ್ಳಿ, ಹನ್ನಿ ಅವ್ಯತಮಹಲ್ ಕಾವಲು ಮತ್ತು ಹೊಸಹಳ್ಳಿ ಇವುಗಳ ಗಡಿ ಬಾಂದುಗಳು ಸೇರತಕ್ಕ ಸ್ಥಳಕ್ಕೆ ಹೋಗುತ್ತದೆ. ತರುವಾಯ ಹನ್ನಿ ಅವ್ಯತಮಹಲ್ ಕಾವಲಿನ ಪಶ್ಚಿಮ ಪಾರ್ಶ್ವದ ಉದ್ದಕ್ಕೂ ಹೊಸಹಳ್ಳಿಯ ಸರ್ವೆ ನಂ. 40ರ ಈಶಾನ್ಯ ಪಾರ್ಶ್ವದಲ್ಲಿನ ಬಂದು ಸ್ಥಳಕ್ಕೆ ಹೋಗುತ್ತದೆ.

ಡಿಸ್ಟ್ರಿಕ್ಟ್	ತಾಲ್ಲೂಕು ಹೋಬಳಿ ಮತ್ತು ಗ್ರಾಮ.	ಸುವರ್ಣ ವಿಸ್ತೀರ್ಣ.	ಬ್ಲಾಕಿನ ಹೆಸರು.	ಸ್ಥಳವ ಚಕ್ಕುಬಂದಿ.
ಕಡೂರು.	ತರೀಕೆರೆ ತಾಲ್ಲೂಕು.	20 ಚದರ ಮೈಲುಗಳು ಮತ್ತು 432 ಎಕರೆಗಳು.	ಹಾದಿಕೆರೆ.	ದಕ್ಷಿಣಕ್ಕೆ.—ಅಲ್ಲಿಂದ ಹೊಸಹಳ್ಳಿಯ ಸರ್ವೆ ನಂ. 40, ಮಲ್ಲೇನಹಳ್ಳಿಯ ಸರ್ವೆ ನಂ. 1, 3 ಮತ್ತು 4 ಇವುಗಳ ಮಧ್ಯೆ ಓಬಳಾಪುರದ ಸರ್ವೆ ನಂ. 52ರ ಈಶಾನ್ಯ ಮೂಲೆಗೆ ಹೋಗುತ್ತದೆ. ತರುವಾಯ ಅದೇ ಸರ್ವೆ ನಂ. 52ರ ವಾಯುವ್ಯ ಪಾರ್ಶ್ವದ ಉದ್ದಕ್ಕೂ ಹೋಗುತ್ತದೆ. ಆಮೇಲೆ ಕೋಡಿಹಳ್ಳಿಯ ಸರ್ವೆ ನಂ. 27, ಕಾಂಟಿನಮಡುವಿನ ಸರ್ವೆ ನಂ. 29, 28 ವ 27, ಮುಂದನಹಳ್ಳಿಯ ಸರ್ವೆ ನಂ. 10 ವ 11, ನಾಗೇನಹಳ್ಳಿಯ ಸರ್ವೆ ನಂ. 50, 51 ವ 47, ಹಾದಿಕೆರೆಯ ಸರ್ವೆ ನಂ. 186 ಇವುಗಳ ಮಧ್ಯೆ, ಅದೇ ಗ್ರಾಮದ ಸರ್ವೆ ನಂ. 190ರ ವಾಯುವ್ಯ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಮತ್ತು ಸರ್ವೆ ನಂ. 184 ವ 185 ಇವುಗಳ ಪಶ್ಚಿಮ ಪಾರ್ಶ್ವಗಳ ಉದ್ದಕ್ಕೂ ಹೋಗುತ್ತದೆ. ತರುವಾಯ ಅದೇ ಗ್ರಾಮದ ಸರ್ವೆ ನಂ. 187ರ ಮಧ್ಯೆ ಹಾದಿಕೆರೆ, ರುಷಿಪುರ ಯರೆಹಳ್ಳಿ ಇವುಗಳ ಗಡಿ ಬಾಂದುಗಳು ಸೇರತಕ್ಕ ಸ್ಥಳಕ್ಕೆ ಹೋಗುತ್ತದೆ. ಆಮೇಲೆ ರುಷಿಪುರ, ಯರೆಹಳ್ಳಿಯ ಸರ್ವೆ ನಂ. 5, ರಾಮೇನಹಳ್ಳಿಯ ಸರ್ವೆ ನಂ. 4, 25, 24 ಪುನಹ 4 ಇವುಗಳ ಉತ್ತರ ಪಾರ್ಶ್ವಗಳ ಉದ್ದಕ್ಕೂ ಅದರ ವಾಯುವ್ಯ ಮೂಲೆಗೆ ಹೋಗುತ್ತದೆ. ತರುವಾಯ ಇಟಗಿಯ ಸರ್ವೆ ನಂ. 58ರ ಉತ್ತರ ವ ಪಶ್ಚಿಮ ಪಾರ್ಶ್ವಗಳ ಉದ್ದಕ್ಕೂ ಅದರ ನೈರುತ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಸರ್ವೆ ನಂ. 3ರ ಮಧ್ಯೆ ಮತ್ತು ಲಕ್ಕೇನಹಳ್ಳಿಯ ಸರ್ವೆ ನಂ. 2ರ ಉತ್ತರ ಪಾರ್ಶ್ವದ ಉದ್ದಕ್ಕೂ ಹೋಗುತ್ತದೆ. ತರುವಾಯ ಪುನಃ ವಾಯುವ್ಯದಿಕ್ಕಾಗಿ ಅದೇ ಗ್ರಾಮದ ಸರ್ವೆ ನಂ. 3ರ ಮಧ್ಯೆ ಅದರ ಪಶ್ಚಿಮ ಪಾರ್ಶ್ವದಲ್ಲಿನ ಬಂದು ಸ್ಥಳಕ್ಕೆ ಹೋಗುತ್ತದೆ. ಆಮೇಲೆ ತಿಮ್ಮಾಪುರದ ಸರ್ವೆ ನಂ. 9, ರಂಗಾಪುರದ ಸರ್ವೆ ನಂ. 13 ವ 8 ಹುರ್ಲಿ ಹಳ್ಳಿಯ ಸರ್ವೆ ನಂ. 60 ಇವುಗಳ ಮಧ್ಯೆ ಅದೇ ಗ್ರಾಮದ ಸರ್ವೆ ನಂ. 59ರ ವಾಯುವ್ಯ ಮೂಲೆಯಲ್ಲಿ ತರೀಕೆರೆ–ಶಿವಮೊಗ್ಗ ಹೈರೋಡು ಸಂಧಿಸುವ ಸ್ಥಳಕ್ಕೆ ಹೋಗುತ್ತದೆ. ತರುವಾಯ ಅದೇ ಸರ್ವೆ ನಂ. 59ರ ಪಶ್ಚಿಮಪಾರ್ಶ್ವ ಮತ್ತು ಮುಳಲಿ ಚನ್ನಯ್ಯನಹಳ್ಳಿ ಸರ್ವೆ ನಂ. 1ರ ಪೂರ್ವಪಾರ್ಶ್ವ ಇವುಗಳ ಪೂರ್ವದ್ದಕ್ಕೂ ಅದೇ ಗ್ರಾಮದ ಆಗ್ನೇಯ ಮೂಲೆಗೆ ಹೋಗುತ್ತದೆ. ಆಮೇಲೆ ಕೋಡಿಹಳ್ಳಿ, ಜೋಡಿ ಗ್ರಾಮದ ಉತ್ತರ ಪಾರ್ಶ್ವದ ಉದ್ದಕ್ಕೂ ಗೋಪಾಲ್ ಬೂಸೇನ ಹಳ್ಳಿಯ ಅಗ್ನೇಯ ಮೂಲೆಗೆ ಹೋಗುತ್ತದೆ. ಪಶ್ಚಿಮಕ್ಕೆ.—ತರುವಾಯ ಗೋಪಾಲ ಬೂಸೇನ ಹಳ್ಳಿಯ ಪೂರ್ವ ಎಲ್ಲೆ ಮತ್ತು ಶಿವಮೊಗ್ಗ ತಾಲ್ಲೂಕು ಈರೆಹಳ್ಳಿಯ ಆಗ್ನೇಯ ಎಲ್ಲೆ ಇವುಗಳ ಉದ್ದಕ್ಕೂ ಹೊರಟ ಸ್ಥಳಕ್ಕೆ ಹೋಗುತ್ತದೆ.

ಬಿ. ರಾಮಸ್ವಾಮಯ್ಯಂರ್,
ಫಾರೆಸ್ಟ್ ಸೆಟ್ಲ್‌ಮೆಂಟ್ ಆಫಿಸರವರು, ಚಿತ್ರದುರ್ಗ ಮತ್ತು ಕಡೂರು ಡಿಸ್ಟ್ರಿಕ್ಟು.

ನೋಟಿಸ್.

ತಾರೀಖು 16ನೇ ಮಾರ್ಚಿ 1903.

ಈ ಕೆಳಗೆ ಕಂಡ ಯತ್ಯಾಗದ ತುಂಡುಗಳನ್ನು ಶಿವಮೊಗ್ಗ ತಾಲ್ಲೂಕು ಮತ್ತೂರು ಗ್ರಾಮದ ಮಠದ ಹಿತ್ತಲಲ್ಲಿ ಕಿಕ್ಕಿದ್ದು ಮತ್ತೂರು ರಾಮಾವಧಾನಿಗಳ ನಿಗಾವಣೆಯಲ್ಲಿ ಇಡಲಿರುತ್ತೆ. ಈ ನೋಟಿಸ್ ತಾರೀಖು ಲಾಗಾಯತು ಒಂದು ತಿಂಗಳ ವಳಗಾಗಿ ಸದರೀ ತುಂಡುಗಳನ್ನು ಬರಬೇಕೆಂದು ಯಾವ ಮನುಷ್ಯನಾಗಲಿ ಬಾಧ್ಯತೆಯನ್ನು ಕುರಿತು ಬರಹ ಮೂಲಕವಾಗಿ ಹೇಳಿಕೆಯನ್ನು ಶಿವಮೊಗ್ಗ ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರಲ್ಲಿ ಹಾಜರ ಮಾಡಬೇಕು. ಅದಕ್ಕೆ ತಪ್ಪಿದರೆ ಸದರೀ ಮಾಲನ್ನು ಸರಕಾರಕ್ಕೆ ಶೇರಿಸಿಕೊಳ್ಳಲ್ಪಡುತ್ತೆ.

1900ನೇ ಇಸವಿ ಫಾರೆಸ್ಟ್ ರೆಗ್ಯುಲೇಷ್ನ 40ನೇ ಸೆಕ್ಷನ್ ಅನುಸರಿಸಿ ನೋಟಿಸ್ ಕೊಡಲ್ಪಟ್ಟಿರುತ್ತೆ.

ಜಾತಿ.		ಲಾಂಬಿ. ಫೂಟ್.	ಇಂಚು.	ಅದರಡಿ ಸುತ್ತಳತೆ. ಫೂಟ್.	ಇಂಚು.
(1)	ಯತ್ಯಾಗದ ತುಂಡು	... 7	7	6	1
(2)	ಡಿಟೋ	.. 7	7	5	9

ಜೆ. ವರ್ಟ್ಯೂರೋ,
ಫಾರ್ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಶಿವಮೊಗ್ಗ ಡಿಸ್ಟ್ರಿಕ್ಟು.